**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಚಿತ್ರದುರ್ಗವಿಭಾಗ: ಚಿತ್ರದುರ್ಗ.**

**KARNATAKA STATE ROAD TRANSPORT CORPORATION**

ಸಂ:ಕರಾರ:ಚಿವಿ:ಸಂಚಾರ:ವಾಣಿಜ್ಯ: 3044 :2019–20 ದಿನಾಂಕ:8.1.2020

---

## :ಇ–ಟೆಂಡರ್ ಪ್ರಕಟಣೆ ಸಂ:12:2019–20
## (ಜಾಹೀರಾತು ಹೋರ್ಡಿಂಗ್ಸ್/ಗ್ಲೋಸೈನ್ ಬೋರ್ಡ್)
## (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ಚಿತ್ರದುರ್ಗ

****

ಕ.ರಾ.ರ.ಸಾ.ನಿಗಮದ ಚಿತ್ರದುರ್ಗವಿಭಾಗದ ವ್ಯಾಪ್ತಿಯ ಬಸ್ಸು ನಿಲ್ದಾಣಗಳಲ್ಲಿ ಜಾಹೀರಾತು ಹೋರ್ಡಿಂಗ್ಸ್ ಮತ್ತು ಗ್ಲೋಸೈನ್ ಬೋರ್ಡ್ ಅಳವಡಿಸಲು ಪ್ಯಾಕೇಜ್‌ವಾರು ಮಾದರಿಯಲ್ಲಿ ಐದು(05) ವರ್ಷದ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http./www.eproc.karnataka.gov.in" ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪರವಾನಿಗೆ ಅವಧಿ ಪೂರ್ಣಗೊಂಡ ನಂತರ ಪುನಃ ಇ–ಟೆಂಡರ್ ಪ್ರಕಟಣೆ ಹೊರಡಿಸಲಾಗುವುದು. ವಿವರಗಳು ಕೆಳಕಂಡಂತಿದೆ.

- Last date and time for submission of tender documents : Date:8-1-2020 to 27-1-2020up to 17:00 hours.
- Opening of prequalification offers (Technical Bid) Date : 29-1-2020@ 11-30 hours.

**ಚಿತ್ರದುರ್ಗ ಬಸ್ ನಿಲ್ದಾಣದ ಹೊರ ಆವರಣ ಪ್ಯಾಕೇಜ್ ಸಂ:01:**

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ ಉದ್ದ & ಅಗಲ (ಚದರ ಅಡಿಗಳಲ್ಲಿ) | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ .ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಯುನಿ ಪೋಲ್ಸ್ | 30*10 | 3 | 1800 | 5.08 | 9144 | | | |
| 2 | ಆರ್ಚ್ | 30*5 | 2 | 300 | 5.08 | 1524 | | | |
| 3 | ಹೋರ್ಡಿಂಗ್ಸ್ | 20*10 | 5 | 1000 | 5.08 | 5080 | | | |
| | | 30*15 | 2 | 900 | 5.08 | 4572 | 33000 | 99000 | 1168.00 |
| 4 | **ಹೋರ್ಡಿಂಗ್ಸ್** | 30*15 | 4 | 1800 | 5.08 | 9144 | | | |
| | | 20*10 | 2 | 400 | 5.08 | 2032 | | | |
| | | 25*12 | 1 | 300 | 5.08 | 1524 | | | |

**ಹಿರಿಯೂರು ಬಸ್ ನಿಲ್ದಾಣದ ಹೊರ ಆವರಣ ಪ್ಯಾಕೇಜ್ ಸಂ:02**

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ .ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಯುನಿ ಪೋಲ್ಸ್ | 30*10 | 2 | 1200 | 3.48 | 4176 | 10450 | 31350 | 370 |
| 2 | ಹೋರ್ಡಿಂಗ್ಸ್ | 20*10 | 9 | 1800 | 3.48 | 6274 | | | |

**ಚಳ್ಳಕೆರೆ ಬಸ್ ನಿಲ್ದಾಣದ ಹೊರ ಆವರಣ ಪ್ಯಾಕೇಜ್ ಸಂ:03**

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ .ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಯುನಿ ಪೋಲ್ಸ್ | 30*10 | 3 | 1800 | 3.32 | 5976 | 19250 | 57750 | 681.00 |
| 2 | ಹೋರ್ಡಿಂಗ್ಸ್ | 25*12 | 12 | 3600 | 3.32 | 11952 | | | |
| | | 20*10 | 2 | 400 | 3.32 | 1328 | | | |

**ಭರಮಸಾಗರ ಬಸ್ ನಿಲ್ದಾಣದ ಹೊರ ಆವರಣ ಪ್ಯಾಕೇಜ್ ಸಂ:04**

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ .ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಯುನಿ ಪೋಲ್ಸ್ | 30*10 | 1 | 600 | 1.74 | 1044 | 3300 | 9900 | 117.00 |
| 2 | ಆರ್ಚ್ | 30*05 | 2 | 300 | 1.74 | 522 | | | |
| 3 | ಹೋರ್ಡಿಂಗ್ಸ್ | 20*10 | 5 | 1000 | 1.74 | 1740 | | | |

## ಸಿರಿಗೆರೆ ಬಸ್ ನಿಲ್ದಾಣದ ಹೂರ ಆವರಣ ಪ್ಯಾಕೇಜ್ ಸಂ:05

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ .ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಯುನಿ ಪೋಲ್ಸ್ | 30*10 | 1 | 600 | 1.16 | 696 | 2090 | 6270 | 74.00 |
| 2 | ಹೋರ್ಡಿಂಗ್ಸ್ | 25*12 | 2 | 1200 | 1.16 | 1392 | | | |

## ಹೂಸದುರ್ಗ ಬಸ್ ನಿಲ್ದಾಣ ಹೂರ ಆವರಣ ಪ್ಯಾಕೇಜ್ ಸಂ:06

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ .ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಹೋರ್ಡಿಂಗ್ಸ್ | 20*10 | 4 | 800 | 5.00 | 4000 | 4000 | 12000 | 142.00 |

## ಚಿತ್ರದುರ್ಗ ಬಸ್ ನಿಲ್ದಾಣ ಒಳ ಆವರಣ ಪ್ಯಾಕೇಜ್ ಸಂ:07

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ .ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ನಿಯಾನ್ ಸೈನ್ | 5*2 | 2 | 20 | 150.00 | 3000 | 24200 | 72600 | 857.00 |
| 2 | ಸಿಸಿ ಟಿವಿ | 2.5*2.5 | 7 | 43.75 | 180.00 | 7875 | | | |
| 3 | ಗ್ಲೋ ಸೈನ್ಸ್ | 5*2 | 7 | 140 | 28.00 | 3920 | | | |
| 4 | ಪಿಲ್ಲರ್ ಬೋರ್ಡ್ | 4*2.5 | 7 | 140 | 28.00 | 3920 | | | |
| 5 | ವಿಡಿಯೋ ವಾಲ್ | 5*5 | 1 | 25 | 219.40 | 5485 | | | |

## ಹಿರಿಯೂರು ಬಸ್ ನಿಲ್ದಾಣ ಒಳ ಆವರಣ ಪ್ಯಾಕೇಜ್ ಸಂ:08

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ.ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಗ್ಲೋ ಸೈನ್ಸ್ | 5*2 | 7 | 140 | 18.00 | 2520 | 8250 | 24750 | 292.00 |
| 2 | ಪಿಲ್ಲರ್ ಬೋರ್ಡ್ | 4*2.5 | 7 | 140 | 18.00 | 2520 | | | |
| 3 | ವಿಡಿಯೋ ವಾಲ್ | 5*5 | 1 | 25 | 128.40 | 3210 | | | |

## ಚಳ್ಳಕೆರೆ ಬಸ್ ನಿಲ್ದಾಣ ಒಳ ಆವರಣ ಪ್ಯಾಕೇಜ್ ಸಂ:09

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ.ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಸಿಸಿ ಟಿವಿ | 2.5*2.5 | 10 | 62.5 | 136.65 | 8540 | 23100 | 69300 | 818.00 |
| 2 | ಗ್ಲೋ ಸೈನ್ಸ್ | 5*2 | 10 | 200 | 18.00 | 2000 | | | |
| 3 | ಪಿಲ್ಲರ್ ಬೋರ್ಡ್ | 2*5 | 11 | 220 | 18.00 | 3960 | | | |
| 4 | ವಿಡಿಯೋ ವಾಲ್ | 5*5 | 1 | 25 | 128.00 | 3200 | | | |
| 5 | ಪ್ಲಾಟ್ ಫಾರಂ ಬೋರ್ಡ್ | 150*2 | 1 | 300 | 18.00 | 5400 | | | |

**ಹೊಸದುರ್ಗ ಬಸ್ ನಿಲ್ದಾಣ ಒಳ ಆವರಣ ಪ್ಯಾಕೇಜ್ ಸಂ:10**

| ಕ್ರ.ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ)' | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ನಿಗದಿಪಡಿಸಿರುವ ದರ ಪ್ರತೀ ಚಅಡಿಗೆ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ.ಮೊತ್ತ | ಅರ್ಜಿ ಶುಲ್ಕ + ಜಿಎಸ್‌ಟಿ |
|---|---|---|---|---|---|---|---|---|---|
| 1 | ಗ್ಲೋ ಸೈನ್ಸ್ | 5*2.6 | 5 | 62.6 | 15.00 | 939 | 939 | 2817 | 34.00 |

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಚಿತ್ರದುರ್ಗವಿಭಾಗ, ಚಿತ್ರದುರ್ಗ-577501 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ.

- : ಸಂಪರ್ಕಿಸುವ ದೂರವಾಣಿ ಸಂಖ್ಯೆ : -

ವಿಭಾಗೀಯ ಸಂಚಾರ ಅಧಿಕಾರಿ - 9606908962

ಸಹಾಯಕ ಸಂಚಾರ ವ್ಯವಸ್ಥಾಪಕರು – 9606908971

Last date for submitting application : As per e-procurement portal.
Tender will be opened on : As per e-procurement portal.

ಸಹಿ/-

ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ.ನಿಗಮ : ಚಿತ್ರದುರ್ಗವಿಭಾಗ

ಪ್ರತಿಯನ್ನು ವಂದನೆಗಳೊಂದಿಗೆ :-

1. ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ ಮತ್ತು ಬೆ.ಮ.ಸಾ.ಸಂಸ್ಥೆ ಕೇಂದ್ರ ಕಛೇರಿ, ಹುಬ್ಬಳ್ಳಿ, ಕಲಬುರಗಿ ಮತ್ತು ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ, ಈ.ಕ.ರ.ಸಾ.ಸಂಸ್ಥೆ ಮತ್ತು ಬೆ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹೆಚ್ಚಿನ ಪ್ರತಿಗಳನ್ನು ಸಾರ್ವಜನಿಕರ ಅವಗಹಾನೆಗಾಗಿ ಮುಖ್ಯ ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಅಂಟಿಸಲು ಕೋರಿದೆ.
4. ಸಹಾಯಕ ಸಂಚಾರ ವ್ಯವಸ್ಥಾಪಕರು, ವಿಭಾಗೀಯ
5. ೨ ಸಂಚಾರ ಅಧಿಕಾರಿ, ಸಹಾಯಕ ಲೆಕ್ಕಾಧಿಕಾರಿ, ಕಾನೂನು ಅಧಿಕಾರಿ, ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಭದ್ರತಾ & ಜಾಗೃತಾಧಿಕಾರಿ, ಕ.ರಾ.ರ.ಸಾ.ನಿಗಮ ಚಿತ್ರದುರ್ಗವಿಭಾಗ ರವರ ಮಾಹಿತಿಗಾಗಿ ದಿನಾಂಕ:**29-1-2020** ರಂದು ಕಛೇರಿಯಲ್ಲಿರಲು ಸೂಚಿಸಿದೆ.
6. ಆಡಳಿತಾಧಿಕಾರಿ, ಕ.ರಾ.ರ.ಸಾ.ನಿಗಮ, ಚಿತ್ರದುರ್ಗವಿಭಾಗ ರವರಿಗೆ ಕಳುಹಿಸುತ್ತಾ ಸದರಿ ಪ್ರಕಟಣೆಯನ್ನು ವಿಭಾಗೀಯ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಈ ಮೂಲಕ ತಿಳಿಸಿದೆ.
7. ಘಟಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ಚಿತ್ರದುರ್ಗ/ಚಳ್ಳಕೆರೆ/ಹೊಸದುರ್ಗ/ಪಾವಗಡ ರವರ ಮಾಹಿತಿಗಾಗಿ ಕಳುಹಿಸುತ್ತಾ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಸದರಿ ಪ್ರಕಟಣೆಯನ್ನು ನಿಲ್ದಾಣದ ಸೂಚನಾ ಫಲಕದಲ್ಲಿ ಪ್ರಕಟಿಸಿ ಸಾರ್ವಜನಿಕ ಗಮನಕ್ಕೆ ತರುವುದು ಹಾಗೂ ಹೆಚ್ಚಿನ ಪ್ರಚಾರ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು.

ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ.ನಿಗಮ : ಚಿತ್ರದುರ್ಗವಿಭಾಗ

## ಇ–ಟೆಂಡರ್‌ನಲ್ಲಿ ಭಾಗವಹಿಸಲು ಷರತ್ತು ಮತ್ತು ನಿಬಂಧನೆಗಳು

**ಟೆಂಡರ್ ಅರ್ಜಿ ಶುಲ್ಕ, ಇ–ಪ್ರೊಕ್ಯೂರ್‌ಮೆಂಟ್ ಶುಲ್ಕ ಹಾಗೂ ಇ.ಎಂ.ಡಿ. ಮೊತ್ತ:–**

1. The tenderer shall pay processing fee and EMD through e-procurement following four modes of payment:
   a)Debit Card, b)Credit Card, c)OTC (Over the counter) and NEFT (National Electronic fund transfer)
2. ಅರ್ಜಿದಾರರು/ಬಿಡ್‌ದಾರರು ಪ್ರಕಟಣೆಯಲ್ಲಿ ಹೋರ್ಡಿಂಗ್ಸ್/ಗೋಸೈನ್ ಬೋರ್ಡ್ ಮತ್ತು ಪ್ಲಾಟ್ ಫಾರಂ ಬೋರ್ಡ್‌ಗಳಿಗೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು Divisional Controller, K.S.R.T.C, CHITRADURGA Division ರವರ ಪದನಾಮಕ್ಕೆ ಪ್ರತ್ಯೇಕವಾಗಿ ಡಿ.ಡಿ. ರೂಪದಲ್ಲಿ ಪಡೆದು ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ವಿಭಾಗೀಯ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸುವುದು. ಸದರಿ ಡಿ.ಡಿ.ಯ ಜೆರಾಕ್ಸ್ ಪ್ರತಿಯನ್ನು ಇ–ಪೋರ್ಟಲ್‌ನಲ್ಲಿ ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.
3. ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಮೂರು (03) ಪಟ್ಟು ಮೊತ್ತವನ್ನು ಇ.ಎಂ.ಡಿ. (Earnest Money Deposit) ಯನ್ನಾಗಿ ನಿಗದಿಪಡಿಸಲಾಗಿರುತ್ತದೆ.
4. ಟೆಂಡರ್ ಪ್ರಕಟಣೆಯಲ್ಲಿ ನಿಗದಿಪಡಿಸಿರುವ ಇ.ಎಂ.ಡಿ.ಮೊತ್ತಕ್ಕೆ, ಟೆಂಡರ್ ಪ್ರಕಟಣೆಯ ದಿನಾಂಕದ ಅವಧಿಯಲ್ಲಿ ಪಡೆದುಕೊಂಡಿರುವ ಡಿ.ಡಿ.ಯನ್ನು ಮಾತ್ರ ಪರಿಗಣಿಸಲಾಗುವುದು. ಇ.ಎಂ.ಡಿ. ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
5. ಪೋರ್ಟಲ್‌ನಲ್ಲಿ ಅಪಲೋಡ್ ಮಾಡಿದ ಹೋರ್ಡಿಂಗ್ಸ್/ಗೋಸೈನ್ ಬೋರ್ಡ್ ಮತ್ತು ಪ್ಲಾಟ್ ಫಾರಂ ಬೋರ್ಡ್‌ಗಳಿಗೆ ಸಂಬಂಧಿಸಿದ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಭಂಧನೆಗಳ ಪ್ರತಿಯಲ್ಲಿ, ಟೆಂಡರ್‌ದಾರರು/ಅರ್ಜಿದಾರರು/ಬಿಡ್‌ದಾರರು ಸಹಿ ಮಾಡಿ, ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
6. ಮೀಸಲಾತಿ ಬಯಸುವ ಬಿಡ್‌ದಾರರು/ಅರ್ಜಿದಾರರು ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು.
7. ಬಿಡ್‌ದಾರರು/ಅರ್ಜಿದಾರರು ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
8. ಒಂದು ವೇಳೆ ಬಿಡ್‌ದಾರರು/ಅರ್ಜಿದಾರರು ಇ–ಪೋರ್ಟಲ್‌ನ ಆರ್ಥಿಕ ಬಿಡ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ನಮೂದಿಸಿದ ಬಿಡ್ ಮೊತ್ತ ಬೇರೆ ಬೇರೆ ಆಗಿದ್ದಲ್ಲಿ, ಇ–ಪೋರ್ಟಲ್‌ನ ಆರ್ಥಿಕ ಬಿಡ್ ಮೊತ್ತವನ್ನು ಪರಿಗಣಿಸಲಾಗುವುದು.
9. ಬಿಡ್‌ದಾರರ/ಅರ್ಜಿದಾರರ ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸಿರುವ ಅರ್ಹ ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸಲಾಗುವುದು.
10. ಇ–ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು/ಅರ್ಜಿದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಟೆಂಡರ್ ತೆರೆಯುವ ದಿನಾಂಕ / ಸಮಯದೊಳಗೆ ಈ ಕಛೇರಿಗೆ ಸಲ್ಲಿಸುವುದು.
11. ಬಿಡ್‌ದಾರರು/ಅರ್ಜಿದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡಬೇಕಿರುತ್ತದೆ.

### I. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸುವ ಸಂಬಂಧ ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು:

1. ಇ–ಪೋರ್ಟಲ್‌ನಲ್ಲಿ ಜಾಹೀರಾತುಗಳ ಸಂಪೂರ್ಣ ವಿವರ, ಟೆಂಡರ್‌ದಾರರು ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು, ಅರ್ಹತಾ ಮಾನದಂಡಗಳು, ಜಾಹೀರಾತು / ಹೋರ್ಡಿಂಗ್ಸ್‌ಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ಪ್ರತಿಯಲ್ಲಿ, ಟೆಂಡರ್‌ದಾರರು ಸಹಿ ಮಾಡಿ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
2. ಬಿಡ್‌ದಾರರು ಜಾಹೀರಾತುಗಳಿಗೆ ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಜಾಹೀರಾತು ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
3. ಮೀಸಲಾತಿ ಬಯಸುವ ಬಿಡ್‌ದಾರರು, ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು.

4. ಬಿಡ್‌ದಾರರು ಒಂದು ಜಾಹೀರಾತು ಪ್ಯಾಕೇಜ್‌ಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
5. ಒಂದು ವೇಳೆ ಬಿಡ್‌ದಾರರು ಇ–ಪೋರ್ಟಲ್‌ನ ಆರ್ಥಿಕ ಬಿಡ್‌ನಲ್ಲಿ ಮತ್ತು ನಿಗದಿತ ನಮೂನೆಯಲ್ಲಿ ನಮೂದಿಸಿದ ಬಿಡ್ ಮೊತ್ತ ಬೇರೆ ಬೇರೆ ಆಗಿದ್ದಲ್ಲಿ, ಇ–ಪೋರ್ಟಲ್‌ನ ಆರ್ಥಿಕ ಬಿಡ್ ಮೊತ್ತವನ್ನು ಪರಿಗಣಿಸಲಾಗುವುದು.
6. ಬಿಡ್‌ದಾರರ ಷರತ್ತಿನ ಟೆಂಡರ್‌ಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸಿರುವ ಅರ್ಹ ಟೆಂಡರ್‌ಗಳನ್ನು ಮಾತ್ರ ಅಂಗೀಕರಿಸಲಾಗುವುದು.
7. ಇ–ಟೆಂಡರ್‌ನಲ್ಲಿ ಭಾಗವಹಿಸುವ ಬಿಡ್‌ದಾರರು ಅಪ್‌ಲೋಡ್ ಮಾಡಿರುವ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಟೆಂಡರ್ ತೆರೆಯುವ ದಿನಾಂಕ / ಸಮಯದೊಳಗೆ ವಿಭಾಗೀಯ ಕಛೇರಿಗೆ ಸಲ್ಲಿಸಬೇಕು.
8. ಬಿಡ್‌ದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡಬೇಕಿರುತ್ತದೆ. ಮ್ಯಾನ್ಯುಯಲ್ ಸಂಧಾನದ ಸಮಯದಲ್ಲಿಯೂ ಬಿಡ್‌ದಾರರು ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುವುದು.

| ರೂ.5.00 ಲಕ್ಷಗಳಿಗಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕವಿರುವ ಜಾಹೀರಾತು ಪ್ಯಾಕೇಜ್‌ಗಳಿಗೆ | ರೂ.5.00 ಲಕ್ಷ ಅಥವಾ ಹೆಚ್ಚಿನ ಮಾಸಿಕ ಪರವಾನಗಿ ಶುಲ್ಕವಿರುವ ಜಾಹೀರಾತು ಪ್ಯಾಕೇಜ್‌ಗಳಿಗೆ |
|---|---|
| ಅ) ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc.).<br>ಆ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೊಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನಿಸ್ ಕಾಯ್ದೆಯಡಿಯಲ್ಲಿ ನೊಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಬಿಡ್‌ದಾರರು ಕ.ರಾ.ರ.ಸಾ. ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ. | ಅ) ಕಂಪನಿ / ವ್ಯಕ್ತಿಯ ವಿಳಾಸ ದೃಢೀಕರಣ ಪತ್ರ (Voter ID, Aadhaar Card, Bank Passbook, Passport, etc.).<br>ಆ) ಆದಾಯ ತೆರಿಗೆ ತೀರುವಳಿ ಪತ್ರ<br>ಇ) ಜಾಹೀರಾತು ಉದ್ಯಮದಲ್ಲಿ ಕನಿಷ್ಠ 2 ವರ್ಷಗಳ ಅನುಭವ ಪತ್ರ (ಕೆಲಸದ ಆದೇಶ ಪ್ರತಿ)<br>ಈ) ಹಿಂದಿನ 2 ವರ್ಷಗಳ ಅವಧಿಯಲ್ಲಿ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಹತ್ತರಷ್ಟು ವಾರ್ಷಿಕ ವಹಿವಾಟಿನ ದಾಖಲೆಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಉ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದ್ದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿಯಲ್ಲಿ ನೊಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು / ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಊ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನಿಸ್ ಕಾಯ್ದೆಯಡಿಯಲ್ಲಿ ನೊಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಋ) ವಹಿವಾಟಿಗೆ ಪೂರಕವಾಗಿ ಕಳೆದ 02 ವರ್ಷದ ಲಾಭ / ನಷ್ಟದ ಲೆಕ್ಕಾಚಾರದ ದಾಖಲೆಗಳು ಮತ್ತು ಬ್ಯಾಲೆನ್ಸ್ ಶೀಟ್ ಪ್ರತಿಗಳನ್ನು ಲೆಕ್ಕಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಎ) ಬಿಡ್‌ದಾರರು ಕ.ರಾ.ರ.ಸಾ. ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ. |

**II. ಭದ್ರತಾ ಠೇವಣಿ:**

1. ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು ಭದ್ರತಾ ಠೇವಣಿ ಮೊತ್ತವನ್ನು ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕ್‌ನಿಂದ ಪಡೆದ ಡಿ.ಡಿ/ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಪಾವತಿಸಬೇಕಾಗಿರುತ್ತದೆ.

**III. ಕರಾರು ಒಪ್ಪಂದ:**

1. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 07 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.
2. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 07 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**IV. ಸ್ಟಾಂಪ್ ಶುಲ್ಕ ಪಾವತಿ:**

ಜಾಹೀರಾತುಗಳಿಗೆ ಆಯ್ಕೆಯಾದ ಪರವಾನಗಿದಾರರು ಕರ್ನಾಟಕ ಸ್ಟಾಂಪ್ ಆಕ್ಟ್-2010 ರನ್ವಯ 05 ವರ್ಷದವರೆಗಿನ ಪರವಾನಗಿ ಅವಧಿಯ ಒಟ್ಟು ಪರವಾನಗಿ ಶುಲ್ಕದ (ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳ ಸೇರಿದಂತೆ) ಸರಾಸರಿ ಮೊತ್ತದ ಮೇಲೆ ಶೇ.1 ರಷ್ಟು ಹಾಗೂ ಭದ್ರತಾ ಠೇವಣಿ ಮೊತ್ತದ ಮೇಲೆ ಶೇ.1 ರಷ್ಟು ಸ್ಟಾಂಪ್ ಶುಲ್ಕವನ್ನು ಭರಿಸಬೇಕಾಗುತ್ತದೆ.

**V. ಮಾಸಿಕ ಪರವಾನಗಿ ಶುಲ್ಕ ಹಾಗೂ ಸರಕು ಮತ್ತು ಸೇವಾ ತೆರಿಗೆ (GST) ಪಾವತಿ:**

1. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು, ಪ್ರಸ್ತುತ ಶೇ.18, ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು.
2. ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಪಾವತಿಸಲು ಇನ್‌ವಾಯ್ಸ್ ಅನ್ನು ಪ್ರತಿ ತಿಂಗಳ 3ನೇ ತಾರೀಖಿನೊಳಗೆ ಪಡೆಯುವುದು.
3. ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18 ರಷ್ಟು ಬಡ್ಡಿಯನ್ನು ಕನಿಷ್ಠ ರೂ.100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು
4. ಪರವಾನಗಿದಾರರಿಂದ GST ನೊಂದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ನೀಡುವುದು.
5. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಬಸ್ ನಿಲ್ದಾಣದ ಲೆಕ್ಕ ಪತ್ರ ಶಾಖೆಯಲ್ಲಿ, DD (ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕುಗಳ) /RTGS/NEFT ಮೂಲಕ ಪಾವತಿಸುವುದು. ಪರವಾನಗಿದಾರರು RTGS/NEFT ಮೂಲಕ ಪಾವತಿ ಮಾಡುವಾಗ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ, ಪರವಾನಗಿದಾರರ ಹೆಸರು ಮತ್ತು ಮಾಹೆಯನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ನಗದು ಕೌಂಟರ್‌ನಲ್ಲಿ, ಭಾರತೀಯ ರಿಜರ್ವ್ ಬ್ಯಾಂಕ್ ನಿಗದಿಪಡಿಸಿದ ಮಿತಿಯಲ್ಲಿ ನಗದು ರೂಪದಲ್ಲಿ ಪಾವತಿಸುವುದು.
6. ಪರವಾನಗಿದಾರರು ಪ್ರತಿ ತಿಂಗಳು ಪಾವತಿಸುವ ಮೊತ್ತವನ್ನು ಕ್ರಮವಾಗಿ ಬಾಕಿಯಿರುವ ಸರಕು & ಸೇವಾ ತೆರಿಗೆ, ವಿದ್ಯುಚ್ಛಕ್ತಿ ಬಳಕೆ ಶುಲ್ಕ, ಬಾಕಿ ಪರವಾನಗಿ ಶುಲ್ಕದ ಬಡ್ಡಿ, ಬಾಕಿ ಪರವಾನಗಿ ಶುಲ್ಕಗಳಿಗೆ ಸರಿದೂಗಿಸಿಕೊಂಡ ನಂತರ ಪ್ರಸಕ್ತ ತಿಂಗಳ ಸರಕು & ಸೇವಾ ಶುಲ್ಕ ಮತ್ತು ಮಾಸಿಕ ಪರವಾನಗಿ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.
7. ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇ.10 ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು & ಸೇವಾ ತೆರಿಗೆಯು ಹೆಚ್ಚಳವಾಗುವುದು.

**X. ವಿದ್ಯುಚ್ಛಕ್ತಿ ಬಿಲ್ಲಿನ ಪಾವತಿ:**

1. ಆಯ್ಕೆಯಾಗುವ ಪರವಾನಗಿದಾರರು ಜಾಹೀರಾತುಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಅಳವಡಿಸಿಕೊಳ್ಳಬೇಕು, ಇದಕ್ಕಾಗಿ ಪ್ರತ್ಯೇಕವಾಗಿ ವಿದ್ಯುಚ್ಛಕ್ತಿ ಮೀಟರ್‌ನ್ನು ಅಳವಡಿಸುವುದು.
2. ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.

**XI. ಹೆಚ್ಚುವರಿ ಸ್ಥಳಾವಕಾಶ:**

1. ಪರವಾನಗಿದಾರರು ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ಜಾಹೀರಾತು ರಚನೆ / ವಿನ್ಯಾಸಕ್ಕೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ನೀಡಿದಲ್ಲಿ, ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.10 ರಷ್ಟು ವಿಸ್ತೀರ್ಣದ ಸ್ಥಳವನ್ನು, ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚ.ಅಡಿ ಪರವಾನಗಿ ಶುಲ್ಕದ 1.5 ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಿ ಒದಗಿಸಲಾಗುವುದು.

**XII. ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ:**

ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸಿ ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |
| ಎರಡನೇ ಬಾರಿಗೆ ಹಾಗೂ ಪುನರಾವರ್ತನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |

**XIII. ಇ.ಎಂ.ಡಿ. / ಭದ್ರತಾ ಠೇವಣಿ ಮೊತ್ತ ಮುಟ್ಟುಗೋಲು ಹಾಕಿಕೊಳ್ಳಲಾಗುವ / ಹಿಂದಿರುಗಿಸುವ ಸಂದರ್ಭಗಳು:**

1. ಟೆಂಡರ್‌ನಲ್ಲಿ ಆಯ್ಕೆಯಾಗದ ಬಿಡ್‌ದಾರರುಗಳ (H1 & H2 ಹೊರತುಪಡಿಸಿ) ಇ.ಎಂ.ಡಿ ಮೊತ್ತವನ್ನು ಟೆಂಡರ್ ಅಂತಿಮಗೊಂಡ ನಂತರ ಹಿಂದಿರುಗಿಸಲಾಗುವುದು. H2 ಬಿಡ್‌ದಾರರ ಇ.ಎಂ.ಡಿ ಮೊತ್ತವನ್ನು H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಂಡ ನಂತರ ಹಿಂದಿರುಗಿಸಲಾಗುವುದು.
2. ಟೆಂಡರ್‌ನಲ್ಲಿ ಅತಿ ಹೆಚ್ಚು ಮೊತ್ತವನ್ನು ಬಿಡ್‌ಮಾಡಿ ಪರವಾನಗಿದಾರರಾಗಿ ಆಯ್ಕೆಯಾದ ಬಿಡ್‌ದಾರರು ನಿಗದಿತ ದಿನಾಂಕದೊಳಗಾಗಿ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಒಂದು ವೇಳೆ ಆಯ್ಕೆಯಾದ ಬಿಡ್‌ದಾರರು ಭದ್ರತಾ ಠೇವಣಿ ಮತ್ತು ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ಪಾವತಿಸಿ, ನಿಗದಿತ ದಿನಾಂಕದೊಳಗಾಗಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಭದ್ರತಾ ಠೇವಣಿ ಹಾಗೂ ಮುಂಗಡ ಮಾಸಿಕ ಪರವಾನಗಿ ಶುಲ್ಕಗಳನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡಿದಾಗ, ಅವರು ಕರಾರು ಒಪ್ಪಂದ ಮಾಡಿಕೊಳ್ಳಲು ವಿಫಲರಾದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**XIV.** ಜಾಹೀರಾತು ಪ್ಯಾಕೇಜ್‌ಗೆ ಹೊಸದಾಗಿ ಆಯ್ಕೆಯಾಗುವ ಪರವಾನಗಿದಾರರಿಗೆ ಫ್ಯಾಬ್ರಿಕೇಷನ್ ಕೆಲಸಗಳಿಗಾಗಿ ಕರಾರು ಒಪ್ಪಂದದ ದಿನಾಂಕದಿಂದ 10 ದಿನಗಳ ಅವಧಿಯನ್ನು ಶುಲ್ಕರಹಿತ ಅವಧಿಯೆಂದು ಪರಿಗಣಿಸಲಾಗುವುದು. ಸದರಿ ಅವಧಿಯು ಒಟ್ಟಾರೆ ಕರಾರಿನ ಅವಧಿಯೊಳಗೆ ಸೇರಿರುತ್ತದೆ.

**XV. ಕರಾರು ರದ್ಧತಿಯ ಷರತ್ತುಗಳು:**

1. ಯಾವುದೇ ಕಾರಣ ನೀಡದೇ, 4 ತಿಂಗಳ ನೋಟಿಸ್ ನೀಡಿ ಜಾಹೀರಾತು ಪ್ಯಾಕೇಜ್‌ನ ಪರವಾನಗಿಯನ್ನು ರದ್ದುಪಡಿಸಲು ನಿಗಮವು ಅಧಿಕಾರವನ್ನು ಹೊಂದಿರುತ್ತದೆ.
2. ಪರವಾನಗಿ ಪಡೆದ ಅವಧಿಯಿಂದ ಒಂದು ವರ್ಷದ ಒಳಗೆ ಪರವಾನಗಿದಾರರು, 6 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.
3. ಒಂದು ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಪರವಾನಗಿದಾರರು ಇಚ್ಛಿಸಿದಲ್ಲಿ, 4 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ನಿಗಮಕ್ಕೆ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.
4. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ 2 ತಿಂಗಳು ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ, ಅಂತಹ ಜಾಹೀರಾತುಗಳ ಪರವಾನಗಿಯನ್ನು ರದ್ದುಪಡಿಸಿ, ಪರವಾನಗಿದಾರರು ನಿಗಮದಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**XVI. ಬಿಡ್‌ದಾರರ / ಪರವಾನಗಿದಾರರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸುವ ಸಂದರ್ಭಗಳು:**

1. ಟೆಂಡರ್‌ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ

ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

2. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
3. ಒಂದು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.
4. ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಜಾಹೀರಾತು ಪ್ಯಾಕೇಜ್‌ನ್ನು ಉಪ–ಪರವಾನಗಿ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.
5. ಕಪ್ಪುಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್ / ಸಂಧಾನದಲ್ಲಿ ಭಾಗವಹಿಸಿದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

## XVII. ಇತರೆ ಷರತ್ತು ಮತ್ತು ನಿಬಂಧನೆಗಳು:

1. ಪರವಾನಗಿದಾರರು ಜಾಹೀರಾತುಗಳನ್ನು ಪ್ರದರ್ಶಿಸಲು ಅವಶ್ಯಕವಿರುವ ಕಾರ್ಯನಿರ್ವಹಣೆಯನ್ನು ಆಯಾ ಕ್ಷೇತ್ರದ ಏಜೆನ್ಸಿಗಳಿಂದ ಪಡೆಯಬಹುದಾಗಿರುತ್ತದೆ. ಆದರೆ ಪೂರ್ಣವಾಗಿ ಜಾಹೀರಾತು ಪ್ಯಾಕೇಜ್‌ನ್ನು ಉಪ–ಪರವಾನಗಿ ನೀಡುವಂತಿಲ್ಲ. ಪರವಾನಗಿ ಪಡೆದ ಪರವಾನಗಿದಾರರೇ ಜಾಹೀರಾತು ಪ್ಯಾಕೇಜ್‌ಗಳನ್ನು ನಿರ್ವಹಿಸುವುದು.
2. ಜಾಹೀರಾತುಗಳಲ್ಲಿ ಕಾನೂನು ಬಾಹಿರ ಮಧ್ಯಪಾನ/ಧೂಮಪಾನ/ಆಶ್ಲೀಲ ಚಿತ್ರ/ಸಾರ್ವಜನಿಕರ ಹಿತಾಶಕ್ತಿಗಳಿಗೆ ಧಕ್ಕೆಯಾಗುವಂತಹ ಹಾಗೂ ಸಾರ್ವಜನಿಕ ಹಿತಾಶಕ್ತಿಗಳಿಗೆ ಧಕ್ಕೆಯಾಗುವಂತಹ ಜಾಹೀರಾತುಗಳನ್ನು ನಿಷೇದಿಸಿದೆ.
3. ಮುಷ್ಕರ / ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.
4. ಜಾಹೀರಾತು / ಹೋರ್ಡಿಂಗ್ಸ್ ಪ್ರದರ್ಶಿಸಲು ಆಯ್ಕೆಯಾಗುವ ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಿರುತ್ತದೆ.
5. ಜಾಹೀರಾತಿನಲ್ಲಿ ಪ್ರದರ್ಶಿಸುವ ವಿವರಗಳು ಅಡ್ವರ್‌ಟೈಸಿಂಗ್ ಸ್ಟ್ಯಾಂಡರ್ಡ್ ಕೌನ್ಸಿಲ್ ಆಫ್ ಇಂಡಿಯಾರವರ ನಿರ್ದೇಶನಗಳಿಗೆ (ASCI CODE) ಒಳಪಟ್ಟಿರಬೇಕು. ಇದಕ್ಕೆ ಜಾಹೀರಾತುದಾರರು ಬದ್ಧರಾಗಿರಬೇಕು.
6. ಜಾಹೀರಾತುಗಳನ್ನು ಕನ್ನಡದಲ್ಲಿಯೂ ಪ್ರದರ್ಶಿಸುವುದು.
7. ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ಜಾಹೀರಾತು ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಸ್ಥಳೀಯ ಇಲಾಖೆ / ಪ್ರಾಧಿಕಾರಗಳಿಗೆ ಪಾವತಿಸಬೇಕಿರುತ್ತದೆ ಹಾಗೂ ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಕಾಲ–ಕಾಲಕ್ಕೆ ಒದಗಿಸಬೇಕು.
8. ಪರವಾನಗಿದಾರರು ತಮ್ಮ ಪರವಾನಗಿ ಅವಧಿ ಮುಕ್ತಾಯವಾದ ನಂತರ ಜಾಹೀರಾತು / ಹೋರ್ಡಿಂಗ್ಸ್‌ಗಳನ್ನು ನಿಗಮದ ಕಟ್ಟಡ / ಆಸ್ತಿಗೆ ಯಾವುದೇ ಹಾನಿಯಾಗದಂತೆ ತೆರವುಗೊಳಿಸಬೇಕು. ಒಂದು ವೇಳೆ ಪರವಾನಗಿದಾರರು ನಿಗದಿತ ಸಮಯದಲ್ಲಿ ತೆರವುಗೊಳಿಸದಿದ್ದಲ್ಲಿ, ನಿಗಮದ ವತಿಯಿಂದ ತೆರವುಗೊಳಿಸುವುದು ಹಾಗೂ ತೆರವುಗೊಳಿಸಲು ಆಗುವ ವೆಚ್ಚವನ್ನು ಪರವಾನಗಿದಾರರ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು.
9. ಪರವಾನಗಿದಾರರು ಹೋರ್ಡಿಂಗ್ಸ್ / ಗ್ಲೋಸೈನ್ ಬೋರ್ಡ್/ಪ್ಲಾಟ್ ಫಾರಂ ಫಲಕಗಳ ಇತ್ಯಾದಿಗಳ ನಿರ್ಮಾಣ / ನಿರ್ವಹಣೆಯ ಸಂದರ್ಭದಲ್ಲಿ ಕಾರ್ಯನಿಮಿತ್ತ ಸಿಬ್ಬಂದಿಗಳಿಗೆ / ಸಾರ್ವಜನಿಕ ಪ್ರಯಾಣಿಕರಿಗೆ ಹಾಗೂ ಸಂಸ್ಥೆಯ ಆಸ್ತಿ–ಪಾಸ್ತಿಗಳಿಗೆ ಧಕ್ಕೆಯುಂಟಾದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮತ್ತು ಸರ್ಕಾರ ಜಾರಿಗೊಳಿಸಬಹುದಾದ ಎಲ್ಲಾ ಕಾನೂನು ನಿಯಮಗಳಡಿ ಪರವಾನಗಿದಾರರೇ ಹೊಣೆಗಾರರಾಗಿರುತ್ತಾರೆ.

10. ಆಯ್ಕೆಗೊಂಡ ಪರವಾನಗಿದಾರರು ಎಲೆಕ್ಟ್ರಿಕಲ್ ಅಳವಡಿಕೆ / ಬೆಳಕಿನ ಅಳವಡಿಕೆ / ವೈರಿಂಗ್ ಇತ್ಯಾದಿ ಸುರಕ್ಷತಾ ಕ್ರಮಗಳ ಸಂಬಂಧ ನಿಗದಿತ ಪ್ರಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರದ ಪ್ರತಿಯನ್ನು ಸಲ್ಲಿಸುವುದು. ವಿದ್ಯುತ್ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಪರವಾನಗಿದಾರರ ಜವಾಬ್ದಾರಿಯಾಗಿರುತ್ತದೆ.
11. ಆಯ್ಕೆಗೊಂಡ ಪರವಾನಗಿದಾರರು ಅಳವಡಿಸಲು ಪ್ರಸ್ತಾಪಿಸುವ ಹೋರ್ಡಿಂಗ್ಸ್‌ಗಳಿಗೆ ಬೆಂಬಲವಾಗಿ ನಿಲ್ಲಿಸುವ ವಿನ್ಯಾಸಗಳಿಗೆ (Structure) ನೊಂದಾಯಿತ ವಿನ್ಯಾಸ ಅಭಿಯಂತರರು/ ಸಂಬಂಧಿಸಿದ ಪ್ರಾಧಿಕಾರಗಳಿಂದ ದೃಢೀಕರಣವನ್ನು ಪಡೆದ ಪ್ರತಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿಯವರ ಪರಿಶೀಲನೆಗೆ ಸಲ್ಲಿಸುವುದು. ಒಂದು ವೇಳೆ ರಚನೆ / ವಿನ್ಯಾಸ / ಯೋಜನೆಯಲ್ಲಿ ನ್ಯೂನ್ಯತೆಯಿದ್ದಲ್ಲಿ 05 ದಿನಗಳೊಳಗೆ ಸರಿಪಡಿಸುವುದು. ಇಲ್ಲದಿದ್ದಲ್ಲಿ ನಿಗಮವು ನ್ಯೂನ್ಯತಾ ಕೆಲಸವನ್ನು ಅಥವಾ ಭಾಗವನ್ನು ತೆರವುಗೊಳಿಸಲು ಅಥವಾ ಸಂಬಂಧಿಸಿದ ಏಜೆನ್ಸಿಯಿಂದ ವೆಚ್ಚವನ್ನು ಮರುಪಾವತಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.
12. ನಿಗಮದ ನಿಲ್ದಾಣಗಳಲ್ಲಿ ಅಥವಾ ಇನ್ನಾವುದೇ ಸ್ಥಳಗಳಲ್ಲಿ ಗೋಡೆ ಬರಹಗಳಿಗೆ ಅವಕಾಶವಿರುವುದಿಲ್ಲ.
13. ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ **(Employees Provident Fund Organisation)** ರವರಲ್ಲಿ ನೊಂದಣಿ ಮಾಡಿಸಿಕೊಂಡಿರಬೇಕು. ನಿಗಮದ ಜಾಹೀರಾತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಸಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಸಂಬಂಧಿಸದಿದ್ದಲ್ಲಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
14. ಆಯ್ಕೆಗೊಂಡ ಪರವಾನಗಿದಾರರು, ನಿಗಮದ ಜಾಹೀರಾತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.
15. ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.
16. ಯಾವುದೇ ಕಾರಣ ನೀಡದೇ ಟೆಂಡರನ್ನು ಪುರಸ್ಕರಿಸುವ / ತಿರಸ್ಕರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
17. ನಿಗಮದಿಂದ ಕರೆಯಲಾಗುವ ಯಾವುದೇ ಟೆಂಡರ್ / ಸಂಧಾನವನ್ನು, ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

**ವಿಶೇಷ ಸೂಚನೆ : –**

1. ನಿಗದಿಪಡಿಸಿದ ಅರ್ಜಿ ಶುಲ್ಕದ ಮೊತ್ತವನ್ನು ಡಿ.ಡಿ.ಮೂಲಕ ಕೊನೆಯ ದಿನಾಂಕದೊಳಗಾಗಿ ವಿಭಾಗೀಯ ಕಛೇರಿಯ ಸಂಚಾರ ಶಾಖೆಗೆ ಕಡ್ಡಾಯವಾಗಿ ಸಲ್ಲಿಸುವುದು. ಸದರಿ ಡಿ.ಡಿಯ ಜರಾಕ್ಸ್ ಪ್ರತಿಯನ್ನು ಇತರೆ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು.
2. ಪೋರ್ಟಲ್‌ನಲ್ಲಿ ಅಪಲೋಡ್ ಮಾಡಿದ ಜಾಹೀರಾತುಗಳಿಗೆ ಸಂಬಂಧಿಸಿದ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವ ಬಗ್ಗೆ ಹಾಗೂ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಷರತ್ತು ಮತ್ತು ನಿಭಂಧನೆಗಳ ಪ್ರತಿಯಲ್ಲಿ, ಟೆಂಡರ್‌ದಾರರು/ಅರ್ಜಿದಾರರು/ಬಿಡ್‌ದಾರರು ಸಹಿ ಮಾಡಿ, ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
3. ಪಾನ್ ಕಾರ್ಡ್ ಸಲ್ಲಿಸುವುದು ಕಡ್ಡಾಯವಾಗಿದ್ದು ಹಾಗೂ ವಿಳಾಸ ದೃಢೀಕರಣ ಪತ್ರಕ್ಕೆ ವೋಟರ್ ಐಡಿ, ಆಧಾರ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಪಾಸಪೋರ್ಟ & ಇತರೆ ದಾಖಲಾತಿಗಳನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.
4. ಎಲ್ಲಾ ಬಿಡ್‌ದಾರರು ಕಪ್ಪುಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ನಾವು ಅಪ್‌ಲೋಡ್ ಮಾಡಿರುವ ಸ್ವಯಂ ದೃಢೀಕರಣ ಪತ್ರದ ನಮೂನೆಯಲ್ಲಿ ಭರ್ತಿ ಮಾಡಿ ಪೂರ್ಣ ಹೆಸರು, ವಿಳಾಸದೊಂದಿಗೆ ಸಹಿ ಮಾಡಿ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.

ವಿಭಾಗೀಯ ನಿಯಂತ್ರಣಾಧಿಕಾರಿ
ಕರಾರಸಾನಿಗಮ :ಚಿತ್ರದುರ್ಗ ವಿಭಾಗ

ಪ್ರತಿಯನ್ನು ಗೌರವಪೂರ್ವಕವಾಗಿ:

1) ನಿರ್ದೇಶಕರು (ಭ&ಜಾ), ಕರಾರಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ನಿರ್ದೇಶಕರು (ಕಾರ್ಯ), ಕರಾರಸಾ. ನಿಗಮ, ಕೇಂದ್ರಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕರಾರಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
4) ವ್ಯವಸ್ಥಾಪಕರ ನಿರ್ದೇಶಕರು, ಬೆಂ.ಮ.ನ.ಸಾ.ಸಂಸ್ಥೆ/ ವಾಕರಸಾಸಂಸ್ಥೆ/ ಈಕರಸಾಸಂಸ್ಥೆ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
5) ಎಲ್ಲಾ ಹಿರಿಯ/ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾ.ನಿಗಮ, ವಾಕರಸಾಸಂಸ್ಥೆ ಮತ್ತು ಈಕರಸಾಸಂಸ್ಥೆ. ರವರ ಮಾಹಿತಿಗಾಗಿ ಮತ್ತು ಹೆಚ್ಚಿನ ಪ್ರತಿಯನ್ನು ವಾಹನ ನಿಲ್ದಾಣಗಳಲ್ಲಿ ಪ್ರದರ್ಶಿಸಲು ಕೋರಲಾಗಿದೆ.

ಪ್ರತಿಯನ್ನು:-

1) ಘಟಕ ವ್ಯವಸ್ಥಾಪಕರು, ಚಿತ್ರದುರ್ಗ, ಹೊಸದುರ್ಗ, ಚಳ್ಳಕೆರೆ, ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
2) ವಿಭಾಗೀಯ ಸಂಚಲನಾಧಿಕಾರಿ/ ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಸಹಾಯಕ ಲೆಕ್ಕಾಧಿಕಾರಿ/ ಸಹಾಯಕ ಕಾನೂನು ಆಧಿಕಾರಿ, ಚಿತ್ರದುರ್ಗ ವಿಭಾಗರವರುಗಳು ದಿನಾಂಕ:-29-1-2020 ರಂದು ಇ- ಟೆಂಡರ್ ನಡೆಯುವ ಸಮಯದಲ್ಲಿ ಕಡ್ಡಾಯವಾಗಿ ಹಾಜರಿರಲು ಸೂಚಿಸಲಾಗಿದೆ.
3) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರು ಸದರಿ ಮಳಿಗೆಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ಇ-ಟೆಂಡರ್ ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ ಹಾಗೂ ಅಯ್ಕೆಯಾದ ಪರವಾನಗಿದಾರರು ನಿಗದಿತ ಸ್ಥಳದ ವಿಸ್ತೀರ್ಣಕ್ಕಿಂತ ಅನಧಿಕೃತವಾಗಿ ಹೆಚ್ಚುವರಿ ಸ್ಥಳ ಉಪಯೋಗಿಸಿಕೊಳ್ಳದಂತೆ ಕ್ರಮ ಜರುಗಿಸಲು ತಿಳಿಸಲಾಗಿದೆ.
4) ಕಿರಿಯ ಆಭಿಯಂತರರು (ವಿದ್ಯುತ್) ಮತ್ತು ಕಿರಿಯ ಆಭಿಯಂತರರು (ಕಾಮಗಾರಿ), ಚಿತ್ರದುರ್ಗ ವಿಭಾಗದವರು, ಮೇಲಿನ ಹೋರ್ಡಿಂಗ್ಸ್, ಗ್ಲೋಸೈನ್ ಬೋರ್ಡ್ ಮತ್ತು ಪ್ಲಾಟ್ ಫಾರಂ ಬೋರ್ಡ್‌ಗಳನ್ನು ಪರಿಶೀಲಿಸಿ ಅಗತ್ಯವಿರುವ ಕಾಮಗಾರಿ ಮತ್ತು ವಿದ್ಯುತ್ ಕೆಲಸಗಳನ್ನು ದಿನಾಂಕದೊಳಗೆ ಸರಿಪಡಿಸಿ ನೀಡಲು ತಿಳಿಸಲಾಗಿದೆ.
5) ಆಡಳಿತಾಧಿಕಾರಿ, ಚಿತ್ರದುರ್ಗ ವಿಭಾಗರವರು, ಸದರಿ ಪ್ರಕಟಣೆಯನ್ನು ವಿಭಾಗೀಯ ಕಛೇರಿಯ ಸೂಚನಾಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
6) ಸಹಾಯಕ ಸಂಚಾರ ವ್ಯವಸ್ಥಾಪಕರು, ಚಿತ್ರದುರ್ಗ ವಿಭಾಗದವರು, ಸದರಿ ಪ್ರಕಟಣೆಯನ್ನು ಸಾರ್ವಜನಿಕ ಅರ್ಜಿದಾರರಿಗೆ ಮಾಹಿತಿ ನೀಡುವುದು ಮತ್ತು ಪ್ರಕಟಣೆಯನ್ನು ವ್ಯಾಪಕ ಪ್ರಚಾರ ನೀಡಲು ಕ್ರಮ ಜರುಗಿಸುವುದು.
7) ನಿಲ್ದಾಣಾಧಿಕಾರಿ/ ಸಂಚಾರ ನಿಯಂತ್ರಕರು ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ, ಭರಮಸಾಗರ, ಸಿರಿಗೆರೆ, ಹೊಸದುರ್ಗ ನಿಯಂತ್ರಣ ಬಿಂದು/ ವಾಹನ ನಿಲ್ದಾಣರವರ ಮಾಹಿತಿಗಾಗಿ ಹಾಗೂ ಈ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ಚಿತ್ರದುರ್ಗ ವಿಭಾಗ: ಚಿತ್ರದುರ್ಗ

(ಅನುಬಂಧ-1)

ರಿಂದ,
ಶ್ರೀ ______________

________________

________________

________________

ಗೆ,
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ,
ಚಿತ್ರದುರ್ಗ ವಿಭಾಗ,
ಚಿತ್ರದುರ್ಗ.

ಮಾನ್ಯರೆ,

ವಿಷಯ : **ಪ್ರಸ್ತುತ ಇ-ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ.**

ಉಲ್ಲೇಖ : ಇ-ಟೆಂಡರ್ ಪ್ರಕಟಣೆ ಸಂ:09/2019-20 ದಿ: 08/11/2019

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಇ-ಟೆಂಡರ್ ಪ್ರಕಟಣೆ ಸಂಖ್ಯೆ : __________ ದಿ : ______________ ರಂತೆ ____________ ಬಸ್ ನಿಲ್ದಾಣದ ____________________ ಜಾಹೀರಾತು ಪ್ಯಾಕೇಜ್ ಬಗ್ಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಿದ್ದು, ಸದರಿ ಟೆಂಡರ್‌ನ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಓದಿಕೊಂಡು ಒಪ್ಪಿರುವ ಬಗ್ಗೆ ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.

ಮುಂದುವರೆದು ಉಲ್ಲೇಖದನ್ವಯ ಹೊರಡಿಸಿರುವ ಇ-ಟೆಂಡರ್‌ನ ಎಲ್ಲಾ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ನಿಗಮವು ತೆಗೆದುಕೊಳ್ಳುವ ನಿರ್ಧಾರ/ಕ್ರಮಗಳಿಗೆ ಬದ್ಧನಾಗಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

( )

ದಿ :

(ಅನುಬಂಧ–2)

ರಿಂದ,
ಶ್ರೀ ______________

________________

________________

ಗೆ,
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ,
ಚಿತ್ರದುರ್ಗ ವಿಭಾಗ,
ಚಿತ್ರದುರ್ಗ.

ಮಾನ್ಯರೆ,

ವಿಷಯ : **ಕಪ್ಪು ಪಟ್ಟಿ(Black List)** ಗೆ ಸೇರಿಲ್ಲದಿರುವ & **Defaulter** ಆಗದೇ ಇರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ.

ಉಲ್ಲೇಖ : ಇ–ಟೆಂಡರ್ ಪ್ರಕಟಣೆ ಸಂ:09/2019–20 ದಿ: 08/11/2019

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಇ–ಟೆಂಡರ್ ಪ್ರಕಟಣೆ ಸಂಖ್ಯೆ : __________ ದಿ : _______________ ರಂತೆ ____________ ಬಸ್ ನಿಲ್ದಾಣದ __________________ ಜಾಹೀರಾತು ಪ್ಯಾಕೇಜ್ ಬಗ್ಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಿದ್ದು, ನಾನು ಕ.ರಾ.ರ.ಸಾ.ನಿಗಮ / ಬೆಂ.ಮ.ಸಾ.ಸಂಸ್ಥೆ / ವಾ.ಕ.ರ.ಸಾ.ಸಂಸ್ಥೆ / ಈ.ಕ.ರ.ಸಾ.ಸಂಸ್ಥೆ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ವಾಣಿಜ್ಯ ಮಳಿಗೆಗಳ/ಜಾಹೀರಾತು ವಿಷಯಕ್ಕೆ ಸಂಬಂಧಿಸಿದಂತೆ **Defaulter** ಆಗಿರುವುದಿಲ್ಲವೆಂದು ಹಾಗೂ **ಕಪ್ಪು ಪಟ್ಟಿ(Black List)**ಗೆ ಸೇರಿಲ್ಲವೆಂದು ಈ ಮೂಲಕ ಸ್ವಯಂ ದೃಢೀಕರಿಸುತ್ತೇನೆ.

ನಾನು ಒದಗಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತ, ಈ ಬಗ್ಗೆ ಯಾವುದೇ ಮಾಹಿತಿ ತಪ್ಪು ಎಂದು ಯಾವುದೇ ಹಂತದಲ್ಲಿ ಕಂಡುಬಂದಲ್ಲಿ ನಾನು ಸಲ್ಲಿಸಿರುವ ಇ.ಎಂ.ಡಿ/ಭದ್ರತಾ ಠೇವಣಿಯ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ನನ್ನ ಆಯ್ಕೆ / ಕರಾರನ್ನು ರದ್ದುಗೊಳಿಸುವ ನಿಯಮದ ಬಗ್ಗೆ ತಿಳಿದು ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ನಾನು ಯಾವುದೇ ತಪ್ಪು ಮಾಹಿತಿ ನೀಡಿರುವುದು ಕಂಡುಬಂದಲ್ಲಿ/ಅಸತ್ಯವೆಂದು ದೃಡಪಟ್ಟಲ್ಲಿ ನಿಗಮವು ತೆಗೆದುಕೊಳ್ಳುವ ನಿರ್ಧಾರ / ಕ್ರಮಗಳಿಗೆ ಬದ್ಧನಾಗಿರುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ..

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

( )

ದಿ :